



# ಹರೆಯದ ನದಿಯ ಎರಡು ದಡಗಳು

■ ಗೌರಿ

**ಹೊಸದೇನಕ್ಕೋ ಎರವಾಗುವಾಗ ನಮ್ಮ ಮನಸ್ಸು ಕುತೂಹಲ ಮತ್ತು ಆತಂಕಕ್ಕೆ ಒಳಗಾಗುವುದು ಸಹಜ. ಇವೆರಡೂ ವಿರುದ್ಧ ಭಾವಗಳು; ಅವುಗಳ ಜಗ್ಗಾಟದಲ್ಲಿಯೇ ಮುಗ್ಧ ಮನಸ್ಸು ಪ್ರಬುದ್ಧವೂ ಆಗುವುದು. ಹರೆಯಕ್ಕೆ ಎರವಾಗುವ ಎಳೆಯ ಮುಗ್ಧ ಮನಸ್ಸೊಂದು, ತನ್ನನ್ನು ತಾನು ಹೊಸ ಜಗತ್ತಿಗೆ ತೆತ್ತುಕೊಳ್ಳುವಾಗ ಉಂಟಾಗುವ ತಲ್ಲಣಗಳನ್ನು ಬಿಂಬಿಸುವ ಕಿರುಚಿತ್ರವಿದು.**

ರೋಮಾಂಚನ ಮತ್ತು ಆತಂಕ ಇವೆರಡು ನಮ್ಮ ಬದುಕಿನ ಬಹುತೇಕ ಮೊದಲುಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಮ್ಮನ್ನು ಜಗ್ಗುತ್ತಲೇ ಇರುವ ಭಾವಗಳು. ಇದನ್ನು ಬಯಕೆ ಮತ್ತು ಹಿಂಜರಿಕೆ ಎಂದೂ ಹೇಳಬಹುದು.

ಮೊಣಕಾಲವರೆಗೆ ನೀರಿರುವ ಹಳ್ಳದಾಟುವಾಗ, ಕಾಲಿಟ್ಟ ಕಲ್ಲು ಕೊಂಚ ಜಾರಿದಾಗ ಆಗುವ ಆತಂಕ ಮತ್ತು ನೀರು ನೀಡುವ ಮುದ; ಮೀನುಗಳು ಕಾಲಿಗೆ ಮುತ್ತಿಕ್ಕುವಾಗ ಆಗುವ ಕಚಗುಳಿ ರೋಮಾಂಚನ, ಈ ಎರಡೂ ನದಿಯ ಎರಡೂ ದಡಗಳ ಹಾಗೆ ಅತ್ತಲೊಂದು ಇತ್ತಲೊಂದು ಸೆಳೆಯುತ್ತಲೇ ಇರುತ್ತದೆ. ಬದುಕಿನ ಎಲ್ಲ ಮೊದಲುಗಳಲ್ಲಿಯೂ ಈ ಹಗ್ಗಜಗ್ಗಾಟ ಇದ್ದೇ ಇರುತ್ತದೆ. ಆ ತುಯ್ತವೇ ಅದನ್ನು ಸ್ಮರಣೀಯಗೊಳಿಸುವುದು.

ಹರೆಯ ಎಂಬುದು ಒಂದು ರೀತಿಯಲ್ಲಿ ಮೇಲೆ ಹೇಳಿದ ಹಳ್ಳ ದಾಟಿದಂತೆ. ಬಯಕೆ ಮತ್ತು ಹಿಂಜರಿಕೆಯ ಜಗ್ಗಾಟ ಎದೆಯೊಳಗೆ ನಿರಂತರವಾಗಿ ಕಡಗೋಲ ಹಾಗೆ ಕಡೆಯುತ್ತಲೇ ಇರುತ್ತದೆ. ಇಂಥ ಮಥನದ ಜಲಕ್‌ಅನ್ನು ತೋರಿಸುವ ಕಿರುಚಿತ್ರ ಫರಿದಾ ಜಹ್ರಾನ್ ಅವರ ಅವರ 'ಯೂಥ್'.

ಹರೆಯದ ರಂಗಿನ ಲೋಕಕ್ಕೆ ಅಡಿಯಿಡುತ್ತಿರುವ ಹುಡುಗಿಯ ಮನಸ್ಸಿನ ತಳಮಳ ತೋರಿಸುತ್ತಲೇ ಸಮಾಜ ಅವಳನ್ನು ನೋಡುವ ರೀತಿಯ ಕಡೆಗೂ ಬೆರಳು ಮಾಡುವ ಪ್ರಯತ್ನ ಈ ಕಿರುಚಿತ್ರದಲ್ಲಿದೆ.

ಈ ಚಿತ್ರ ಶುರುವಾಗುವುದೇ ಕ್ಲಬ್‌ನ ಬಾತ್‌ರೂಮ್‌ನಲ್ಲಿ. ಇಬ್ಬರು ಗೆಳತಿಯರು ಅಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ. 'ಪಾರ್ಟಿಗೆ ಬಂದಿರುವ ಹುಡುಗನೊಬ್ಬ ನಿನ್ನನ್ನೇ ದಿಟ್ಟಿಸಿ ನೋಡ್ತಿದ್ದಾನೆ. ನೀನು ನನ್ನ ಜೊತೆಗೆ ಅಂಟಿಕೊಂಡಿದ್ದರೆ ಏನೂ ಪ್ರಯೋಜನ ಇಲ್ಲ. ಅವನೊಟ್ಟಿಗೆ ಹೋಗು' ಎಂದು ಅವಳು ಹುರಿದುಂಬಿಸುತ್ತಿದ್ದಾಳೆ. ಇವಳಿಗೆ ಹಿಂಜರಿಕೆ, ಜತೆಗೆ ತನ್ನೊಳಗೆ ಚಿಗಿತುಕೊಳ್ಳುತ್ತಿರುವ ಹರೆಯ ಕೊಡುತ್ತಿರುವ ಹಸಿಬಿಸಿ ಬಯಕೆಗಳನ್ನು ಅನುಭವಿಸುವ ಬಯಕೆಯೂ ಇದೆ.



**ಹೆಸರು:** ಯೂಥ್ (ಈಜಿಪ್ತ್)
**ನಿರ್ದೇಶಕಿ:** ಫರಿದಾ ಜಹ್ರಾನ್
**ನಿರ್ಮಾಣ:** ಲಿ ಚೆನ್ ಬೇಕರ್
**ಛಾಯಾಗ್ರಹಣ:** ಕ್ರಿಸ್ಟಿನ್ ಕೌಕೆ
**ತಾರಾಗಣ:** ಯಾಸ್ಮಿನ್, ನೇಸ್ಮಾ ಬಹಿ, ಅಹಮದ್ ಹೋಸ್ನಿ, ಎನ್ನಾಸ್ ಎಲ್. ಫಲಾಲ್, ಮುಸ್ತಫಾ ಹುಸೇನ್

ಮನಸ್ಸಿನ ತುಂಬ ರಂಗು ತುಂಬಿಕೊಂಡು ಆ ಹುಡುಗನೊಟ್ಟಿಗೆ ಕಾರಿನಲ್ಲಿ ಹೋಗುವ ಅವಳಿಗೆ ಅವನೊಟ್ಟಿಗೆ ರಮಿಸಲು ಸಾಧ್ಯವಾಗುವುದೇ ಇಲ್ಲ. ಮುತ್ತಿಕ್ಕಲು ಬಂದವನ ಕೆನ್ನೆಗೆ ತನಗರಿವಿಲ್ಲದ ಹಾಗೇ ಹೊಡೆದುಬಿಡುತ್ತಾಳೆ. ಆ ಹುಡುಗ ನಡುರಾತ್ರಿ ಅವಳನ್ನು ಅಲ್ಲಿಯೇ ಬಿಟ್ಟು ಹೊರಟುಹೋಗುತ್ತಾನೆ.

ಇಲ್ಲಿಯವರೆಗೆ ಈ ಚಿರುಚಿತ್ರದ ನಡಿಗೆ ಒಂದು ಬಗೆಯ ಒಳಮುಖಿ ನಡಿಗೆಯಲ್ಲಿ ಸಾಗುತ್ತದೆ. ಅದಕ್ಕೆ ಪೂರಕವಾಗಿ ಹೆಚ್ಚು ಕ್ಲೋಸ್ ಅಪ್ ಮತ್ತು ಎಕ್ಸ್ಟ್ರಾ ಕ್ಲೋಸ್ ಅಪ್ ಶಾಟ್‌ಗಳನ್ನೇ ಬಳಸಿಕೊಳ್ಳಲಾಗಿದೆ. ಇಲ್ಲಿಂದ ಮುಂದೆ ಲಾಂಗ್ ಶಾಟ್‌ಗಳಿಗೆ ಜಿಗಿಯುತ್ತದೆ. ಕ್ಯಾಮೆರಾದಲ್ಲಿ ಮಾತ್ರವಲ್ಲ; ಕಥನದಲ್ಲಿಯೂ. ಅಂಗಡಿ ಮುಂದೆ ನಿಂತ ಒಂಟಿ ಹುಡುಗಿಯನ್ನು ಅಂಗಡಿಯವ ಮಾತಾಡಿಸುವುದು, ರಸ್ತೆಯ ಮೇಲೆ ನಡೆದುಹೋಗುತ್ತಿರುವವಳನ್ನು ಹುಡುಗರು ಚುಡಾಯಿಸುವುದು, ಟ್ಯಾಕ್ಸಿ ಡ್ರೈವರ್ ವಿಶೇಷವಾಗಿ ಮಾತಾಡಿಸುವುದು... ಇವೆಲ್ಲವೂ ಆ ಹುಡುಗಿಗೆ ಹೊಸದೊಂದು ಜಗತ್ತನ್ನು ಪರಿಚಯಿಸುತ್ತಿರುವ ಹಾಗೆಯೇ ಆ ಜಗತ್ತು ಹೆಣ್ಣನ್ನು ನೋಡುವ ಬಗೆಯನ್ನು ಪ್ರೇಕ್ಷಕನಿಗೂ ಪರಿಚಯಿಸುತ್ತ ಹೋಗುತ್ತದೆ.

ಈ ಚಿತ್ರದ ಕೊನೆಯ ದೃಶ್ಯವೂ ವಿಶೇಷವಾಗಿದೆ. ಹಾಸಿಗೆಯಲ್ಲಿ ನಿದ್ದೆಯಿಲ್ಲದೆ ಹೊರಳುತ್ತಿರುವ ಮಗಳನ್ನು ಅಮ್ಮ ಬಂದು 'ಇನ್ನೂ ಮಲಗಿಲ್ಲವೇ?' ಎಂದು ಪ್ರಶ್ನಿಸುತ್ತಾಳೆ. ಮಗಳು 'ನಿದ್ದೆ ಬರುತ್ತಿಲ್ಲ' ಎನ್ನುತ್ತಾಳೆ. ಯಾಕೆ ಎಂದು ಕೇಳಿದರೆ ಅವಳಲ್ಲಿ ಉತ್ತರವಿಲ್ಲ. ಆ ರಾತ್ರಿಯ ಅನುಭವದಿಂದ ಅವಳ ಜಗತ್ತೇ ಬದಲಾಗಿದೆ. ಅವಳು ಜಗತ್ತನ್ನು ನೋಡುವ ರೀತಿಯೂ ಬದಲಾಗಿದೆ. ಈ ರೂಪಾಂತರದಲ್ಲಿ ಕಳೆದುಕೊಂಡಿದ್ದೇನು? ಪಡೆದುಕೊಳ್ಳುತ್ತಿರುವುದೇನು? ಈ ದ್ವಂದ್ವ ಅವಳ ಮುಖದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಮಗಳ ದ್ವಂದ್ವ ಅಮ್ಮನಿಗೂ ಗೊತ್ತಾಗಿದೆ. ಈ ಸಂಕೀರ್ಣ ಮನಸ್ಥಿತಿಯನ್ನು ನಿರ್ದೇಶಕರು ಸಂಕೇತಗೊಳಿಸುವ ರೀತಿ ಕುತೂಹಲಕಾರಿಯಾಗಿದೆ. ತೆರೆಯ ಮೇಲೆ ಎಡ ಅರ್ಧಕ್ಕೆ ಮಗಳು ಮಲಗಿದ್ದಾಳೆ. ಬಲಬದಿಗೆ ಅಮ್ಮ ಟೇಬಲ್ ಮೇಲೆ ಮಗಳ ಬಟ್ಟೆ ಹರವಿಕೊಂಡು ಇಸ್ತ್ರಿಪೆಟ್ಟಿಗೆ ಬಿಸಿಯಾಗಿದೆಯೇ ಎಂದು ಪರೀಕ್ಷಿಸಿ ಇಸ್ತ್ರಿ ಹಾಕಲು ತೊಡಗುತ್ತಾಳೆ. ಇದೊಂದು ದೃಶ್ಯವೇ ಈ ಚಿತ್ರಕ್ಕೆ ಹೊಸದೇ ಒಂದು ಪ್ರಭೆಯನ್ನು ಹುಟ್ಟಿಸುವವಷ್ಟು ಶಕ್ತವಾಗಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2Q9Ddlz ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.